

ಹಿಡೀತದೆ ಅಂತ ನೋಡ್ವಾ... ಇವನ ರೈಲು ಇವತ್ತೇ ನಿಲ್ಲಿಸ್ಬೇಕು' ಅಂತ ಗುಂಪಿನಲ್ಲಿರುವವನೊಬ್ಬ ತಥಾಕಥಿತ ಹುಡುಗನನ್ನು ಅಣಕಿಸಿದ.

'ಪಂಥ ಕಟ್ಟೋಕೆ ರೆಡಿಯಾ?' ಹುಡುಗ ಬಾಜಿ ಕಟ್ಟಲೂ ತಯಾರಾಗಿದ್ದ. 'ಆಯ್ತುಪ್ಪಾ ಎಷ್ಟು ನೀರು ತುಂಬುತ್ತೆ ನೋಡೇ ಬಿಡೋಣ... ನೀನು ಹೇಳಿದ ಹಾಗೆ ನೀರು ತುಂಬದಿದ್ರೆ ನೂರು ರೂಪಾಯಿ ಕೊಡ್ಬೇಕು ಆಯ್ತಾ?' ಅಂತ ಇನ್ನೊಬ್ಬ ಹುಡುಗ ಹೇಳಿ ಮುಗಿಸುವ ಮುನ್ನವೇ ಆ ಹುಡುಗ ಕಡಲ ನೀರಿಗಿಳಿದು ಆ ಬಲೂನಿನ ಬಾಯಿಯನ್ನು ಅಲೆಗಳ ರಾಚುವಿಕೆಗೆ ಸರಿಯಾಗಿರುವಂತೆ ಹಿಡಿದು ನೀರು ತುಂಬಿಸತೊಡಗಿದ. ಇತರ ಹುಡುಗರೂ ಅವನ ಜೊತೆಗೂಡಿದರು. ಆ